# ಗ್ರೇಟರ್ ಬೆಂಗಳೂರು ಪ್ರಾಧಿಕಾರ

## ಬೆಂಗಳೂರು ಪೂರ್ವ ನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ. ಕೆ.ಆರ್.ಪುರ ವಿಭಾಗ. ಹಳೇ ಮದ್ರಸ್ ರಸ್ತೆ ಕೆ.ಆರ್.ಪುರ ಬೆಂಗಳೂರು-36

ಸಂ:ಜಿ.ಬಿ.ಎ(ಬೆಂ.ಪೂ.ನ.ಪಾ)/ಕೆ.ಆರ್.ಪುರ/ಉ.ವಿ/ಪಿ.ಆರ್/ /2025-26 ದಿನಾಂಕ:25/09/2025

ರವರಿಗೆ,

Principal,
Amara jyothi Public School,
Basasavanapura, Main Road,
Devasandra, K R Puram
Bangalore-560036.

ವಿಷಯ: ಕೆ.ಆರ್.ಪುರ ಉಪ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ.53 ಬಸವನಪುರ, ದೇವಸಂದ್ರ, ಬೆಂಗಳೂರು-560036 ನಲ್ಲಿರುವ Sri Amara jyothi Public School ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: ಲೋಇ 59 ಬಿಇಡಿ 2019 ದಿನಾಂಕ: 07/05/2022.
2. ತಮ್ಮ ಪತ್ರದ ದಿನಾಂಕ: 15-09-2025.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೆ.ಆರ್.ಪುರ ಉಪ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ.-53 ಬಸವನಪುರ ಮುಖ್ಯ ರಸ್ತೆ, ದೇವಸಂದ್ರ, ಬೆಂಗಳೂರು-560036 ನಲ್ಲಿರುವ Sri Amara jyothi Public School ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ಉಲ್ಲೇಖ (2) ರ ಪತ್ರದಲ್ಲಿ ಕೋರಿರುತ್ತೀರಿ.

ಉಲ್ಲೇಖ (1) ಸರ್ಕಾರಿ ಆದೇಶದಲ್ಲಿ ನಿರ್ದೇಶನ ನೀಡಿರುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೆ.ಆರ್.ಪುರ ಉಪ ವಿಭಾಗ ರವರು ಕಟ್ಟಡವನ್ನು ಪರಿಶೀಲಿಸಿ "Structurally Stable Certificate" ಅನ್ನು ನೀಡಲು ಆದೇಶಿಸಿರುವುದರಿಂದ ಹಾಗೂ ಉಲ್ಲೇಖ (1) ರ ಆದೇಶದ ನಿರ್ದೇಶನದಂತೆ ಈಗಾಗಲೇ ನಿರ್ಮಾಣಗೊಂಡು ಅಸ್ತಿತ್ವದಲ್ಲಿರುವಂತಹ ಕಟ್ಟಡಗಳಿಗೆ ರಚನಾತ್ಮಕ (Structural Evaluation) ಮೌಲ್ಯಮಾಪನ ಮಾಡಿಸಿ National Building Code ಮಾನದಂಡಗಳ ಅನ್ವಯ ಪ್ರಮಾಣ ಪತ್ರ ನೀಡಲು ಸೂಚಿಸುವುದರಿಂದ ಪ್ರಸ್ತಾಪಿತ ಕಟ್ಟಡದ ಸ್ಟ್ರಕ್ಚರಲ್ ಪರೀಕ್ಷೆಗಳನ್ನು ನಡೆಸಿರುವ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದೆ

ಸದರಿ ಕಟ್ಟಡವು 2007ನೇ ವರ್ಷದಲ್ಲಿ ನಿರ್ಮಾಣಗೊಂಡಿರುವುದರಿಂದ ಉಲ್ಲೇಖ (1) ರ ಸರ್ಕಾರಿ ಸುತ್ತೋಲೆಯಲ್ಲಿ ಕಂಡಿಕೆ (4) ಉಪ-ಕಂಡಿಕೆ (1) ರಲ್ಲಿ ನೀಡಿರುವ ನಿರ್ದೇಶನದಂತೆ ಕನಿಷ್ಠ 2 ರೀತಿಯ Non-Destructive Test ಗಳನ್ನು ಕೈಗೊಳ್ಳಲು ಸೂಚಿಸಿರುವ ಮೇರೆ ಉಲ್ಲೇಖ (1) ರ ಸರ್ಕಾರಿ ಸುತ್ತೋಲೆಯಲ್ಲಿ ಕಂಡಿಕೆ (4) ಉಪ-ಕಂಡಿಕೆ (5) ರಲ್ಲಿ ವಿವರಿಸುವಂತೆ (ಈಶೋ 9001: ) Bangalore University, Department Of Civil Engineering .ರವರ ಮುಖಾಂತರ ಪರೀಕ್ಷೆಗಳನ್ನು ಕೈಗೊಂಡಿರುವ ಪರೀಕ್ಷೆ ವರದಿಯ ಪ್ರತಿಯೊಂದು ಸಲ್ಲಿಸಿದ್ದು ಕಿರಿಯ ನಗರ ಯೋಜಕರು ನಗರಸಭೆ, ಕೆ.ಆರ್.ಪುರ ಬೆಂಗಳೂರು-560036 ರವರಿಂದ ಅನುಮೋದಿತ ನಕ್ಷೆಗನುಗುಣವಾಗಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ. ಸದರಿ ಕಟ್ಟಡವು GF(Ground floor) ಮತ್ತು FF(First Floor) ಗಳನ್ನು ಒಳಗೊಂಡಿದ್ದು 2007 ನೇ ಸಾಲಿನಲ್ಲಿ ನಿರ್ಮಿಸಲಾಗಿರುತ್ತದೆ.

ಸದರಿ ಕಟ್ಟಡಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಹಾಗೂ ಸ್ಥಳ ತಪಾಸಣಾ ಸಮಯದಲ್ಲಿ ಕಟ್ಟಡದ ಹೊರಭಾಗ ಮತ್ತು ಶೌಚಾಲಯಗಳು, ಮೆಟ್ಟಿಲುಗಳು, ಅಗ್ನಿಶಾಮಕ ಸುರಕ್ಷತಾ ಕ್ರಮಗಳು, ಮಳೆ ನೀರು ಕೊಯ್ಲು ಕಾಮಗಾರಿಗಳು ಹಾಗೂ ಇನ್ನಿತರೆ ಎಲ್ಲಾ ಅಂಶಗಳನ್ನು ಗಮನಿಸಿದ್ದು ತೃಪ್ತಿಕರವಾಗಿರುವ ಬಗ್ಗೆ ವಾರ್ಡ್ ಸಂಖ್ಯೆ 53 ಅಭಿಯಂತರರು ವರದಿಸಿರುತ್ತಾರೆ.

ಮುಂದುವರೆದು ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಟ್ರಸ್ಟ್ ರವರು ಕಟ್ಟಡದ ಕಾಂಕ್ರೀಟ್ ಸದೃಢತೆಯ ಬಗ್ಗೆ – –2025 ರಂದು ಕಟ್ಟಡದ ಮಾಲೀಕರು Bangalore University, Department Of Civil Engineering. ರವರ ಮುಖಾಂತರ ಪರೀಕ್ಷೆಗಳನ್ನು ಕೈಗೊಂಡಿರುವ ಪರೀಕ್ಷಾ ವರದಿ ಪ್ರತಿಯನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ. ಸದರಿ ನಡೆಸಲಾಗದ ಪರೀಕ್ಷೆಯ ವರದಿಯಂತೆ ಕಟ್ಟಡವು ಸದೃಢತೆಯಿಂದ ಇರುವುದು ಕಂಡು ಬಂದಿರುತ್ತದೆ.

**ಉಲ್ಲೇಖ** (1)ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಕಟ್ಟಡ ಸುರಕ್ಷಣೆ ಪ್ರಮಾಣ ಪತ್ರವನ್ನು ವಿತರಿಸಲು ಮೊತ್ತ ರೂ.5000/–( ರೂ. ಐದು ಸಾವಿರ ಮಾತ್ರ) ಗಳನ್ನು Sri Amara jyothi Public School ರವರು HDFC bank, ಡಿ.ಡಿ. ಸಂಖ್ಯೆ: 000363 ಅನ್ನು ಮುಖ್ಯ ಆಯುಕ್ತರು ಬಿಬಿಎಂಪಿ ರವರ ಹೆಸರಿನಲ್ಲಿ ದಿನಾಂಕ:25/09/2025 ರಲ್ಲಿ ಪಾವತಿಸಿರುತ್ತಾರೆ.

- Sri Amara jyothi Public School, ವಾರ್ಡ್ ಸಂಖ್ಯೆ,–53 ಬಸವನಪುರ ಮುಖ್ಯ ರಸ್ತೆ, ದೇವಸಂದ್ರ, ಬೆಂಗಳೂರು–560036. ರಲ್ಲಿ ನಿರ್ಮಿಸಲಾಗಿರುತ್ತದೆ ಎಂದು ಟ್ರಸ್ಟ್ ಸಂಸ್ಥೆಯವರು ಮನವಿ ಪತ್ರ ನೀಡಿರುತ್ತಾರೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, Bangalore University, Department Of Civil Engineering. ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪರೀಕ್ಷಾ ವರದಿಯನ್ನು ಪರಿಗಣಿಸಿ ಹಾಗೂ ವಾರ್ಡ್ ಅಭಿಯಂತರರು ನೀಡಿರುವ ವರದಿಯನ್ನು ನೀಡಿರುವ ವರದಿಯನ್ವಯ ವಾರ್ಡ್ ಸಂಖ್ಯೆ,53 ಬಸವನಪುರ ಮುಖ್ಯ ರಸ್ತೆ, ಕೆ.ಆರ್.ಪುರ, ಬೆಂಗಳೂರು–560036 ನಲ್ಲಿರುವ Sri Amara jyothi Public School ಕಟ್ಟಡವು ಪ್ರಸಕ್ತ ಶೈಕ್ಷಣಿಕ ಸಾಲಿಗೆ Structurally Stable ಇದೆ ಎಂದು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ಉಳಿದಂತೆ, ಪ್ರಸ್ತಾಪಿತ ಕಟ್ಟಡದ Non-Structural Elements (Infrastructural facilities) ಗೆ ಸಂಬಂಧಿಸಿದಂತೆ, ಸಿವಿಲ್ ಇಂಜಿನಿಯರ್, ಆರೋಗ್ಯಾಧಿಕಾರಿ, ಕಂದಾಯ ಅಧಿಕಾರಿ, ಅಗ್ನಿಶಾಮಕ ಅಧಿಕಾರಿ, ಸ್ಥಳೀಯ ಸಂಸ್ಥೆಯ ಅಧಿಕಾರಿಗಳನೊಳಗೊಂಡ ಪರೀಕ್ಷಾ ತಂಡದವತಿಯಿಂದ ಪರಿಶಿಲಿಸಿ, ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು ಹಾಗೂ "Fire safety Certificate" ಅನ್ನು ಮುಖ್ಯ ಅಗ್ನಿಶಾಮಕ ಅಧಿಕಾರಿಯಿಂದ ಪಡೆಯತಕ್ಕದ್ದು.

ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೆ.ಆರ್.ಪುರ ಉಪ ವಿಭಾಗ.